# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 652 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 22.07.2024 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಒಟ್ಟಾರೆ ಎಷ್ಟು ಸರ್ಕಾರಿ/ಖಾಸಗಿ ಆಸ್ಪತ್ರೆಗಳಿವೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಆರೋಗ್ಯ ಸಂಸ್ಥೆಗಳ ವಿವರಗಳನ್ನು ಅನುಬಂಧ-1 & ಅನುಬಂಧ-2ರಲ್ಲಿ ನೀಡಲಾಗಿದೆ.<br>ರಾಜ್ಯದಲ್ಲಿ KPME ಆನ್ ಲೈನ್ ಪೋರ್ಟಲ್‌ನ ಮುಖಾಂತರ ಈ ವರೆಗೂ ಒಟ್ಟು 4,754 ಖಾಸಗಿ ಆಸ್ಪತ್ರೆಗಳು ನೊಂದಣಿಗೊಂಡಿರುತ್ತವೆ. (ತಾಲ್ಲೂಕುವಾರು ಖಾಸಗಿ ಆಸ್ಪತ್ರೆಗಳ ಮಾಹಿತಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ) |
| ಆ | ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಶುಚಿತ್ವ ಇಲ್ಲದೇ ರೋಗಿಗಳ ಕುಟುಂಬಸ್ಥರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಶುಚಿತ್ವಕ್ಕೆ ಹೆಚ್ಚು ಒತ್ತು ಕೊಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ/ಕೈಗೊಳ್ಳುವ ಕ್ರಮಗಳೇನು; | ಶುಚಿತ್ವಕ್ಕೆ ಒತ್ತು ಕೊಡುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ / ಕೈಗೊಳ್ಳಲಾದ ಕ್ರಮಗಳು:<br>1. ಶುಚಿತ್ವವನ್ನು ಕಾಪಾಡಲು ಕಾಯಕಲ್ಪ ಮತ್ತು ಎನ್ ಕ್ಯೂ ಎ ಎಸ್/ ಲಕ್ಷ್ಯ/ ಮುಸ್ಕಾನ್ ಮುಂತಾದ ಗುಣಮಟ್ಟ ಖಾತ್ರಿ ಕಾರ್ಯಕ್ರಮದ ಯೋಜನೆಗಳನ್ನು ಎಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ಕೇಂದ್ರಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ. ಈ ಯೋಜನೆಗಳಡಿಯಲ್ಲಿ ಆಸ್ಪತ್ರೆ ಮತ್ತು ಸುತ್ತಮುತ್ತಲಿನ ಪರಿಸರದ ಸ್ವಚ್ಛತೆ ಮತ್ತು ನೈರ್ಮಲ್ಯ ಕಾಪಾಡಲು ಉತ್ತೇಜಿಸುತ್ತದೆ.<br>2. ರೋಗಿ ಸಂದರ್ಶನದ ವೇಳೆಗಳನ್ನು ಸಡಿಲಿಸದೆ ಅನುಸರಿಸಲಾಗುತ್ತದೆ.<br>3. ಶಸ್ತ್ರಚಿಕಿತ್ಸೆಗಳನ್ನು ನೆರವೇರಿಸುವ ಶಸ್ತ್ರ ಚಿಕಿತ್ಸಾ ಕಟ್ಟಡಗಳನ್ನು ಆಗಿಂದಾಗ್ಗೆ ಶುಚಿಗೊಳಿಸಲಾಗುತ್ತದೆ.<br>4. ಆಸ್ಪತ್ರೆಗಳಲ್ಲಿ ಹೊರಗಿನ ಚಪ್ಪಲಿಗಳು ಮತ್ತು ಶೂಗಳನ್ನು procedures ಗಳನ್ನು ನೆರವೇರಿಸುವ ಕೊಠಡಿಗಳಿಗೆ ನಿರ್ಭಂದಿಸಿ ಸೋಂಕುಗಳನ್ನು ತಡೆಗಟ್ಟಲಾಗುತ್ತಿದ್ದು ಶುಚಿತ್ವಕ್ಕೆ ಒತ್ತು ನೀಡಲಾಗುತ್ತಿದೆ. |

| | | |
|---|---|---|
| | | 5. ಆಸ್ಪತ್ರೆಗಳಲ್ಲಿನ ಶುಚಿತ್ವವನ್ನು ಉತ್ತೇಜಿಸಲು ಮತ್ತು ಸದಾ ಕಾಪಾಡಲು ಆಸ್ಪತ್ರೆಗಳಿಗೆ ಕಾಯಕಲ್ಪ ಯೋಜನೆಯಡಿಯಲ್ಲಿ ಪ್ರತಿವರ್ಷವು ಪ್ರಶಸ್ತಿಗಳನ್ನು ವಿತರಿಸಲಾಗುತ್ತಿದೆ, ಪ್ರಶಸ್ತಿಯ ಭಾಗವಾಗಿ ಬಹುಮಾನಗಳನ್ನು ಮತ್ತು ಪ್ರಶಸ್ತಿ ಪತ್ರಗಳನ್ನು ಶೇ70% ರಷ್ಟು ಅಂಕ ಪಡೆದ ಎಲ್ಲಾ ಆಸ್ಪತ್ರೆಗಳಿಗೆ ನೀಡಲಾಗುತ್ತಿದೆ.<br>6. ಆಸ್ಪತ್ರೆಗಳಲ್ಲಿ Hospital Infection control and Cleanliness committee (HICCC)ಗಳನ್ನು ರಚಿಸಿ ಆಸ್ಪತ್ರೆಗಳ ಮಟ್ಟದಲ್ಲಿ ಸೇವಾ ಪೂರೈಕೆದಾರರು ತಮ್ಮ ಆಸ್ಪತ್ರೆಯ ಸ್ವಚ್ಛತೆಯ ಬಗ್ಗೆ ಇರುವ ನ್ಯೂನತೆಗಳನ್ನು ಚರ್ಚಿಸಿ ಸರಿದೂಗಿಸಲು ಕ್ರಮವನ್ನು ಕೈಗೊಳ್ಳುತ್ತಿದ್ದಾರೆ.<br>7. ಆರೋಗ್ಯ ಸಂಸ್ಥೆಗಳಲ್ಲಿ ಶುಚಿತ್ವವನ್ನು ಕಾಪಾಡಲು ಪ್ರತಿವರ್ಷ ಕಾಯಕಲ್ಪ ಮೌಲ್ಯಮಾಪನವನ್ನು ನಡೆಸಲಾಗುತ್ತಿದೆ.<br>8. ಶುಚಿತ್ವವನ್ನು ಪ್ರೋತ್ಸಾಹಿಸಲು ಮೌಲ್ಯಮಾಪನದ ಆಧಾರದ ಮೇಲೆ ಪ್ರೋತ್ಸಾಹಧನವನ್ನು ಆರೋಗ್ಯ ಸಂಸ್ಥೆಗಳಿಗೆ ನೀಡಲಾಗುತ್ತಿದೆ.<br>9. ಕಾಯಕಲ್ಪ ಚಟುವಟಿಕೆಯಲ್ಲಿ 2022-23 ನೇ ಸಾಲಿನಲ್ಲಿ 1641 ಆರೋಗ್ಯ ಸಂಸ್ಥೆಗಳು ಪ್ರಶಸ್ತಿ ಪಡೆದಿರುತ್ತವೆ. (ಜಿಲ್ಲಾ ಆಸ್ಪತ್ರೆ-33, ತಾಲ್ಲೂಕು ಆಸ್ಪತ್ರೆ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು-188, ನಗರ ಸಮುದಾಯ ಆರೋಗ್ಯ ಕೇಂದ್ರಗಳು: 08, ಪ್ರಾಥಮಿಕ ಆರೋಗ್ಯ ಕೇಂದ್ರಗಳು-760, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು-140 ಹಾಗೂ ಆಯುಷ್ಮಾನ್ ಆರೋಗ್ಯ ಮಂದಿರಗಳು-512.<br>10. ರಾಷ್ಟ್ರೀಯ ಗುಣಮಟ್ಟ ಖಾತ್ರಿ ಮಾನದಂಡಗಳು (NQAS) ಚಟುವಟಿಕೆಯಲ್ಲಿ ಇದುವರೆಗೂ 928 ಆರೋಗ್ಯ ಸಂಸ್ಥೆಗಳು ರಾಜ್ಯ ಮತ್ತು ರಾಷ್ಟ್ರೀಯ ಪ್ರಮಾಣೀಕೃತವಾಗಿರುತ್ತವೆ. |
| ಇ | ಹಲವು ಆಸ್ಪತ್ರೆಗಳಲ್ಲಿ ರೋಗಿಯನ್ನು ದಾಖಲಿಸಿಕೊಳ್ಳುವ ಮುನ್ನ ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಅಲೆದಾಡಿಸಿ, ರೋಗಿಯ ಮತ್ತು ರೋಗಿಯ ಕುಟುಂಬಸ್ಥರ ಮನಸ್ಥಿತಿಯು ಕುಗ್ಗಿಹೋಗಿ, ರೋಗಿಗೆ ಸರಿಯಾದ ಸಮಯದಲ್ಲಿ ಸೂಕ್ತ | ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಾಥಮಿಕ ಚಿಕಿತ್ಸೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ/ಸಮುದಾಯ ಆರೋಗ್ಯ ಕೇಂದ್ರ ಮಟ್ಟದಲ್ಲಿ ನೀಡಲಾಗುತ್ತದೆ.<br>ರೋಗಿಯು ಸರಿಯಾದ ಸಮಯದಲ್ಲಿ ಚಿಕಿತ್ಸೆ ದೊರಕದೇ ಜೀವ ಕಳೆದುಕೊಳ್ಳುವ ಸಂಭವ ಉದ್ಭವಿಸದಂತೆ SAST ನಿಂದ ಸರ್ಕಾರಿ |

| | | |
|---|---|---|
| | ಚಿಕಿತ್ಸೆ ದೊರಕದೇ. ಜೀವ ಕಳೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆಸ್ಪತ್ರೆಗಳನ್ನೊಳಗೊಂಡಂತೆ ಖಾಸಗಿ ಆಸ್ಪತ್ರೆಗಳನ್ನು ನೋಂದಾಯಿಸಿಕೊಂಡು ಲಭ್ಯವಿಲ್ಲದ ಚಿಕಿತ್ಸೆಗಳನ್ನು AB-ArK ಯೋಜನೆಯಡಿ ನೀಡಲಾಗುತ್ತಿದೆ.<br>251 ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸಾ ವಿಧಾನಗಳು, 934 ತೃತೀಯ ಹಂತದ ಚಿಕಿತ್ಸಾ ವಿಧಾನಗಳು ಮತ್ತು 171 ತುರ್ತು ಚಿಕಿತ್ಸಾ ವಿಧಾನಗಳಿಗೆ ಸರ್ಕಾರಿ ಆಸ್ಪತ್ರೆಗಳಿಂದ ರೆಫರಲ್ ಪಡೆದು ಚಿಕಿತ್ಸೆ ಪಡೆಯಬಹುದಾಗಿದೆ. |
| ಈ | ಇಲ್ಲವಾದಲ್ಲಿ, ಪ್ರತಿಯೊಂದು ಆಸ್ಪತ್ರೆಯಲ್ಲಿ ಪ್ರತಿಯೊಬ್ಬ ರೋಗಿ ಆಯಾ ಖಾಯಿಲೆಗೆ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಎಲ್ಲಾ ಸೌಕರ್ಯಗಳು ಇಲ್ಲದೆ ಇರುವುದರಿಂದ ಈ ಸೌಕರ್ಯಗಳನ್ನು ಪ್ರತಿಯೊಂದು ಆಸ್ಪತ್ರೆಗೆ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳೇನು; | |
| ಉ | ಕೆಲವು ಆಸ್ಪತ್ರೆಗಳಲ್ಲಿ ರೋಗಿಗೆ ಸೂಕ್ತ ಸ್ಪಂದನೆ ದೊರಕದೇ. ಮೃತಪಟ್ಟಿರುವ ಉದಾಹರಣೆಗಳು ಇತ್ತೀಚೆಗೆ ವರದಿಯಾಗುತ್ತಿದ್ದು, ಈ ಬಗ್ಗೆ ಸರ್ಕಾರದ ದೃಢವಾದ ಕ್ರಮಗಳೇನು; | |
| ಊ | ಒಬ್ಬ ರೋಗಿಯನ್ನು ಒಂದು ಆಸ್ಪತ್ರೆಯಿಂದ ಮತ್ತೊಂದು ಆಸ್ಪತ್ರೆಗೆ ಕರೆದೊಯ್ಯುವಾಗ, ಟ್ರಾಫಿಕ್ ಸಮಸ್ಯೆಗೆ ಸಿಲುಕಿ ರೋಗಿಗೆ ತುರ್ತಾಗಿ ಚಿಕಿತ್ಸೆ ದೊರಕದೆ ಮರಣ ಹೊಂದಿರುವಂತಹ ಪ್ರಕರಣಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ವಿಶೇಷವಾಗಿ ಬೆಂಗಳೂರಿನಲ್ಲಿ ಅಂಬ್ಯುಲೆನ್ಸ್ ಗಳಿಗಾಗಿ ಪ್ರತ್ಯೇಕ ಲೈನ್ ಮಾಡಿ ಸುಗಮವಾಗಿ ಆಸ್ಪತ್ರೆಗೆ ತಲುಪಿಸಲು ಸರ್ಕಾರದ ಮಟ್ಟದಲ್ಲಿ ಚರ್ಚಿಸಲಾಗುವುದೆ; ಹಾಗಿದ್ದಲ್ಲಿ ಯಾವಾಗ ಈ ಬಗ್ಗೆ ಕ್ರಮವಹಿಸಲಾಗುವುದು? | ಬಂದಿದೆ.<br>ಬೆಂಗಳೂರು ನಗರ ಸಂಚಾರ ವ್ಯಾಪ್ತಿಯಲ್ಲಿ ಅತೀ ತುರ್ತು ಸಂದರ್ಭದಲ್ಲಿ ರೋಗಿಗಳನ್ನು ಅಂಬ್ಯುಲೆನ್ಸ್ ಗಳ ಮೂಲಕ ಸಾಗಿಸುವ ಮಾಹಿತಿ ಬಂದ ಸಂದರ್ಭದಲ್ಲಿ ಗ್ರೀನ್ ಕಾರಿಡಾರ್ ನೀಡಿ ಅಂಬ್ಯುಲೆನ್ಸ್ ಗಳು ಸಾಗುವ ಮಾರ್ಗಗಳಲ್ಲಿ ಮುಕ್ತ ಸಂಚಾರ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.<br><br>ಅಂಬ್ಯುಲೆನ್ಸ್‌ಗಳು ಸಂಚರಿಸುವ ಸಮಯದಲ್ಲಿ ಪ್ರತಿ ಜಂಕ್ಷನ್‌ಗಳಲ್ಲಿ ನಿಸ್ತಂತು ಮೂಲಕ ಮಾಹಿತಿ ರವಾನಿಸಿ ಅಂಬ್ಯುಲೆನ್ಸ್‌ಗಳ ಸುಗಮ ಸಂಚಾರಕ್ಕೆ ಅಡಚಣೆಯಾಗದಂತೆ ಕ್ರಮ ವಹಿಸಲಾಗುತ್ತಿದೆ.<br><br>ಅಂಬ್ಯುಲೆನ್ಸ್‌ಗಳ ತುರ್ತು ಸಂಚಾರದ ಸಮಯದಲ್ಲಿ 112 ಸಹಾಯವಾಣಿಗೆ ಕರೆ ಮಾಡಿದಲ್ಲಿ ಅಂಬ್ಯುಲೆನ್ಸ್ ಗಳು ಸಾಗುವ ಮಾರ್ಗಗಳಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿರುತ್ತದೆ.<br><br>ಅಸ್ತ್ರಂ (Actionable Intelligence for Sustainable Traffic Management) ASTraM ಎಂಬ ಸ್ಮಾರ್ಟ್ ಟ್ರಾಫಿಕ್ ಇಂಜಿನ್ ವ್ಯವಸ್ಥೆಯಲ್ಲಿ ಇ-ಪಾತ್ ಅಂಬ್ಯುಲೆನ್ಸ್ ಎಂಬ ಉಪಕ್ರಮವಿದ್ದು, ಇದರ |

| | | |
|---|---|---|
| | | ಅಡಿಯಲ್ಲಿ ನಗರದಲ್ಲಿ ಸಂಚರಿಸುವ ಅಂಬ್ಯುಲೆನ್ಸ್ ಗಳ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದೆ. ಸಂಚಾರ ನಿರ್ವಹಣಾ ಕೇಂದ್ರದಲ್ಲಿ ಅಂಬ್ಯುಲೆನ್ಸ್‌ಗಳನ್ನು ನೋಂದಾಯಿಸಿಕೊಂಡು ಅವುಗಳು ಪ್ರಯಾಣ ಪ್ರಾರಂಭಿಸುವ ಮತ್ತು ತಲುಪಬೇಕಾದ ಸ್ಥಳಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅವುಗಳ ಸಂಚರಣೆಯನ್ನು ಪರಿಶೀಲಿಸಲಾಗುತ್ತದೆ. 120 ಸೆಕೆಂಡ್‌ಗಳಿಗೆ ಮೀರಿದ ಅವಧಿಯವರೆಗೆ ಯಾವುದೇ ಅಂಬ್ಯುಲೆನ್ಸ್ ಸಂಚಾರ ದಟ್ಟಣೆಯಲ್ಲಿ ಸಿಕ್ಕಿಹಾಕಿಕೊಂಡಲ್ಲಿ ಈ ಮುಖೇನ SOS ಬಟನ್ ಆಗಿ ಕೂಡಲೇ ಅತ್ತಕಡೆ ಗಮನ ಹರಿಸಿ ಸಂಚಾರ ದಟ್ಟಣೆಯನ್ನು ನಿವಾರಣೆ ಮಾಡಲು ಮಾಹಿತಿ ರವಾನೆಯಾಗುತ್ತದೆ. ಸದರಿ ಉಪಕ್ರಮವು ಈಗ ಪರೀಕ್ಷೆಯಲ್ಲಿರುತ್ತದೆ.<br><br>ಆರೋಗ್ಯ ಇಲಾಖೆಯ ವತಿಯಿಂದ ಈಗಾಗಲೇ ನಿರ್ವಹಣಾ ಕೇಂದ್ರದಲ್ಲಿ 108 ಅಂಬ್ಯುಲೆನ್ಸ್ ಗಳ ಸುಗಮ ಸಂಚಾರಕ್ಕಾಗಿ ಸಿಬ್ಬಂದಿಯವರುಗಳನ್ನು ನಿಯೋಜಿಸಲಾಗಿದ್ದು, ಸದರಿಯವರು ಅಂಬ್ಯುಲೆನ್ಸ್ ಗಳ ಪ್ರಾರಂಭದ ಸ್ಥಳ (ಅರಿಜಿನ್) ಮತ್ತು ತಲುಪಬೇಕಾದ (ಡೆಸ್ಟಿನೇಷನ್) ಸ್ಥಳಗಳ ಮಾಹಿತಿಯನ್ನು ಸಂಗ್ರಹಿಸಿ, ಸಂಚಾರ ವಿಭಾಗದ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಶೀಘ್ರವಾಗಿ ಆಸ್ಪತ್ರೆಗಳನ್ನು ತಲುಪಲು ಅನುವು ಮಾಡಿಕೊಡಲಾಗುತ್ತಿದೆ. |

**ಕಡತ ಸಂಖ್ಯೆ:** ಆಕುಕ 74 ಎಸ್‌ಬಿವಿ 2024.

**(ದಿನೇಶ್ ಗುಂಡೂರಾವ್ )**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

LAQ - 652 (B)

# ಅನುಬಂಧ -1

| ರಾಜ್ಯದಲ್ಲಿರುವ ಆರೋಗ್ಯ ಸಂಸ್ಥೆಗಳ ವಿವರ As on 23-11-2023. | | | | |
|---|---|---|---|---|
| ಕ್ರ.ಸಂ | ಜಿಲ್ಲೆ | ತಾಲ್ಲೂಕು ಆಸ್ಪತ್ರೆ | ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರ | ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರ |
| 1 | ಬೆಂಗಳೂರು ನಗರ (ಬಿಬಿಎಂಪಿ ಹೊರತುಪಡಿಸಿ) | 3 | 5 | 36 |
| 2 | ಬೆಂಗಳೂರು ಗ್ರಾಂ | 4 | 2 | 48 |
| 3 | ರಾಮನಗರ | 3 | 5 | 61 |
| 4 | ಚಿತ್ರದುರ್ಗ | 5 | 11 | 80 |
| 5 | ದಾವಣಗೆರೆ | 4 | 4 | 80 |
| 6 | ಕೋಲಾರ | 4 | 2 | 63 |
| 7 | ಚಿಕ್ಕಬಳ್ಳಾಪುರ | 5 | 2 | 57 |
| 8 | ಶಿವಮೊಗ್ಗ | 6 | 7 | 93 |
| 9 | ತುಮಕೂರು | 9 | 4 | 144 |
| 10 | ಬಾಗಲಕೋಟೆ | 5 | 8 | 48 |
| 11 | ಬೆಳಗಾವಿ | 9 | 16 | 139 |
| 12 | ವಿಜಯಪುರ | 4 | 9 | 63 |
| 13 | ಧಾರವಾಡ | 3 | 0 | 34 |
| 14 | ಗದಗ | 4 | 2 | 39 |
| 15 | ಹಾವೇರಿ | 6 | 5 | 69 |
| 16 | ಉ.ಕನ್ನಡ | 10 | 3 | 82 |
| 17 | ಬಳ್ಳಾರಿ | 2 | 6 | 30 |
| 18 | ವಿಜಯನಗರ | 5 | 7 | 49 |
| 19 | ಬೀದರ್ | 4 | 8 | 53 |
| 20 | ಕಲಬುರಗಿ | 6 | 16 | 84 |
| 21 | ಯಾದಗಿರಿ | 2 | 6 | 41 |
| 22 | ಕೊಪ್ಪಳ | 3 | 9 | 46 |
| 23 | ರಾಯಚೂರು | 4 | 6 | 50 |
| 24 | ಚಾಮರಾಜನಗರ | 3 | 3 | 60 |
| 25 | ಚಿಕ್ಕಮಗಳೂರು | 6 | 5 | 89 |
| 26 | ದಕ್ಷಿಣ ಕನ್ನಡ | 4 | 8 | 65 |
| 27 | ಹಾಸನ | 7 | 15 | 134 |
| 28 | ಕೊಡಗು | 2 | 7 | 29 |
| 29 | ಮಂಡ್ಯ | 6 | 10 | 113 |
| 30 | ಮೈಸೂರು | 6 | 9 | 118 |
| 31 | ಉಡುಪಿ | 2 | 6 | 62 |
| | ರಾಜ್ಯದ ಒಟ್ಟು | 146 | 206 | 2159 |



File No. HFW/74/SBV/2024-HEALTH 2-HEALTH AND FAMILY WELFARE SEC (Computer No. 1465385)
Generated from eOffice by BHAVANA R H, HFW-ASST2(RH)-HEALTH2, ASSISTANT 2, HEALTH AND FAMILY WELFARE SEC on 21/10/2025 11:19 AM

(1)

# ಅನುಬಂಧ-1

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಜಿಲ್ಲಾ ಆಸ್ಪತ್ರೆ ಹಾಗೂ 100 ಹಾಸಿಗೆ ಮೇಲ್ಪಟ್ಟ ಸಾರ್ವಜನಿಕ ಆಸ್ಪತ್ರೆಗಳ ವಿವರ.

1. ಜಿಲ್ಲಾ ಆಸ್ಪತ್ರೆ, ಬಾಗಲಕೋಟೆ.
2. ಜಿಲ್ಲಾ ಆಸ್ಪತ್ರೆ, ಬಳ್ಳಾರಿ.
3. ಜಿಲ್ಲಾ ಆಸ್ಪತ್ರೆ , ಚಿಕ್ಕಬಳ್ಳಾಪುರ.
4. ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು.
5. ಜಿಲ್ಲಾ ಆಸ್ಪತ್ರೆ , ಚಿತ್ರದುರ್ಗ.
6. ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ, ಮಂಗಳೂರು
7. ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ
8. ಜಿಲ್ಲಾ ಆಸ್ಪತ್ರೆ , ಧಾರವಾಡ
9. ಜಿಲ್ಲಾ ಆಸ್ಪತ್ರೆ, ಹಾವೇರಿ.
10. ಎಸ್ ಎನ್ ಆರ್ ಜಿಲ್ಲಾ ಆಸ್ಪತ್ರೆ , ಕೋಲಾರ
11. ಜಿಲ್ಲಾ ಆಸ್ಪತ್ರೆ , ಮೇಟಗಳ್ಳಿ, ಮೈಸೂರು.
12. ಜಿಲ್ಲಾ ಆಸ್ಪತ್ರೆ, ರಾಮನಗರ.
13. ಜಿಲ್ಲಾ ಆಸ್ಪತ್ರೆ , ತುಮಕೂರು.
14. ಜಿಲ್ಲಾ ಆಸ್ಪತ್ರೆ , ಉಡುಪಿ.
15. ಜಿಲ್ಲಾ ಆಸ್ಪತ್ರೆ, ವಿಜಯಪುರ.
16. ಜಿಲ್ಲಾ ಆಸ್ಪತ್ರೆ, ಯಾದಗಿರಿ.

## ಬೆಂಗಳೂರು ನಗರದ ಪ್ರಧಾನ ಆಸ್ಪತ್ರೆಗಳು

1. ಕೆ.ಸಿ.ಸಾರ್ವಜನಿಕ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು
2. ಸರ್ ಸಿ.ವಿ.ರಾಮನ್ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರ, ಬೆಂಗಳೂರು
3. ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು

## ಸಾರ್ವಜನಿಕ ಆಸ್ಪತ್ರೆ, (100 ಹಾಸಿಗೆಗಳಿಗಿಂತ ಮೇಲ್ಪಟ್ಟ ಆಸ್ಪತ್ರೆಗಳು)

1. ಸಾರ್ವಜನಿಕ ಆಸ್ಪತ್ರೆ, ಕೊಳ್ಳೇಗಾಲ, ಚಾಮರಾಜನಗರ
2. ಸಾರ್ವಜನಿಕ ಆಸ್ಪತ್ರೆ, ಚಿಂತಾಮಣಿ, ಚಿಕ್ಕಬಳ್ಳಾಪುರ.
3. ಸಾರ್ವಜನಿಕ ಆಸ್ಪತ್ರೆ, ಹೊಳೆನರಸೀಪುರ, ಹಾಸನ
4. ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ, ಹಾಸನ.
5. ಸಾರ್ವಜನಿಕ ಆಸ್ಪತ್ರೆ, ವಿರಾಜಪೇಟೆ, ಕೊಡಗು
6. ಸಾರ್ವಜನಿಕ ಆಸ್ಪತ್ರೆ, ಸೋಮವಾರಪೇಟೆ, ಕೊಡಗು.
7. ಸಾರ್ವಜನಿಕ ಆಸ್ಪತ್ರೆ, ಶಿಕಾರಿಪುರ, ಶಿವಮೊಗ್ಗ
8. ಸಾರ್ವಜನಿಕ ಆಸ್ಪತ್ರೆ, ಸಾಗರ, ಶಿವಮೊಗ್ಗ

ಜಂಟಿ ನಿರ್ದೇಶಕರು (ವೈದ್ಯಕೀಯ)
ಆರೋಗ್ಯ ಮತ್ತು ಕು.ಕ. ಸೇವೆಗಳ ನಿರ್ದೇಶನಾಲಯ
ಆರೋಗ್ಯಸೌಧ, ಮಾಗಡಿ ರಸ್ತೆ, ಬೆಂಗಳೂರು-23



File No. HFW/74/SBV/2024-HEALTH 2-HEALTH AND FAMILY WELFARE SEC (Computer No. 1465385)
Generated from eOffice by BHAVANA P H, HFW-ASST2(BH)-HEALTH2, ASSISTANT 2, HEALTH AND FAMILY WELFARE SEC on 21/10/2025 11:19 AM
Scanned with OKEN Scanner

ಅನುಬಂಧ-(2) (೪)

## ಟಿಪ್ಪಣಿ

ರಾಜ್ಯದಲ್ಲಿ ಪ್ರಸ್ತುತ ಗ್ರಾಮೀಣ ಭಾಗದಲ್ಲಿ ಒಟ್ಟು 9160 ಉಪಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲಾವಾರು ಸಂಖ್ಯೆ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಜಿಲ್ಲೆ | ಉಪ ಕೇಂದ್ರಗಳು |
|---|---|---|
| 1 | ಬೆಂಗಳೂರು ನಗರ (ಬಿಬಿಎಂಪಿ ಹೊರತುಪಡಿಸಿ) | 123 |
| 2 | ಬೆಂಗಳೂರು ಗ್ರಾಂ | 199 |
| 3 | ರಾಮನಗರ | 240 |
| 4 | ಚಿತ್ರದುರ್ಗ | 338 |
| 5 | ದಾವಣಗೆರೆ | 270 |
| 6 | ಕೋಲಾರ | 251 |
| 7 | ಚಿಕ್ಕಬಳ್ಳಾಪುರ | 203 |
| 8 | ಶಿವಮೊಗ್ಗ | 357 |
| 9 | ತುಮಕೂರು | 572 |
| 10 | ಬಾಗಲಕೋಟೆ | 239 |
| 11 | ಬೆಳಗಾವಿ | 585 |
| 12 | ವಿಜಯಪುರ | 310 |
| 13 | ಧಾರವಾಡ | 185 |
| 14 | ಗದಗ | 190 |
| 15 | ಹಾವೇರಿ | 305 |
| 16 | ಉ.ಕನ್ನಡ | 344 |
| 17 | ಬಳ್ಳಾರಿ | 137 |
| 18 | ವಿಜಯನಗರ | 212 |
| 19 | ಬೀದರ್ | 275 |
| 20 | ಕಲಬುರಗಿ | 339 |
| 21 | ಯಾದಗಿರಿ | 170 |
| 22 | ಕೊಪ್ಪಳ | 173 |
| 23 | ರಾಯಚೂರು | 213 |
| 24 | ಚಾಮರಾಜನಗರ | 254 |
| 25 | ಚಿಕ್ಕಮಗಳೂರು | 365 |
| 26 | ದಕ್ಷಿಣ ಕನ್ನಡ | 430 |
| 27 | ಹಾಸನ | 456 |
| 28 | ಕೊಡಗು | 196 |
| 29 | ಮಂಡ್ಯ | 399 |
| 30 | ಮೈಸೂರು | 510 |
| 31 | ಉಡುಪಿ | 320 |
| | **ಒಟ್ಟು** | **9160** |

ಸಹ ನಿರ್ದೇಶಕರು,
(ಆರೋಗ್ಯ ಮತ್ತು ಯೋಜನೆ),
ಆರೋಗ್ಯ ಮತ್ತು ಕು.ಕ. ಸೇವೆಗಳು,
ಬೆಂಗಳೂರು.



File No. HFW/74/SBV/2024-HEALTH 2-HEALTH AND FAMILY WELFARE SEC (Computer No. 1465385)
Scanned with OKEN Scanner
Generated from eOffice by BHAVANA B H, HFW-ASST2(BH)-HEALTH2, ASSISTANT 2, HEALTH AND FAMILY WELFARE SEC on 21/10/2025 11:19 AM